Distribution of Government Land in Koppal Taluk Raichur District

699 SRI V. P. MUDGAL (Koppal) Will the Minister for Revenue be pleased to state :—

(a) the total area of Government land available ; and the area distributed to the landless persons in Koppal Taluk, Raichur District :

(b) the total area encroached by persons and the action taken against the illegal occupants ;

(c) the area (wet area) held by landlords illegally in Hitnal Circle, Koppal Taluk (Information village-wise be furnished) ;

(d) why action was not taken agninst encroachers, who have sufficient holding and the reasons thereon ?

SRI B. BASAVALINGAPPA (Minister for Revenue).—

(a) No land is available for distribution as Koppal Taluk comes under Tungabhadra Reservoir Valley Project area and all Government lands are required by the Forest Department for afforestation purpose. Hence no lands were assigned since 1972-73.

(b) The total area of Government lands encroached is 3883 Acres, 24 Guntas. According to Government inrtructions contained in Government Order No. RD 105 LGP 77 dated 1st September 1977 an extent of 2111 A. 25 G. out of 3883 Acres, 24 Guntas has been granted in favour of the landless and insufficient holders who have encroached Governmeht lands. Action is being taken to evict the encroachers who are sufficient holders.

(c) The area held by landlords illegally in Hitnal Circles is as noted below.—

Village		*Area held illegally* A—G
Hosahalli	...	3-00
Korihalli	...	2-00
Hirekasankandi	...	12-00
Narayanpet	...	0-20
Agalikeri	...	15-08
Holinudlapur	...	2-01
Shivapur	...	44-30
Achalpur	...	5-00
Hittanahall	...	10-02
	Total	94-21

(d) Action is being taken to evict the encroachers who are sufficient holders.

ಶ್ರೀ ವಿ. ಪಿ. ಮುದಗಲ್.—ತಮ್ಮ ಮೊದಲನೇ ಉತ್ತರದಲ್ಲಿ, ಕೊಪ್ಪಲ್ ತಾಲ್ಲೂಕು ತುಂಗ ಭದ್ರಾ ಜಲಾಶಯ ಕಣಿವೆ ಯೋಜನೆಯ ಪ್ರಯೋಜಕ್ಕೆ ಬಳಪಡುವುದರಿಂದ ಹಾಗೂ ಮನೆ ಬೆಳೆಸುವ ಉದ್ದೇಶಕ್ಕಾಗಿ ಎಲ್ಲ ಸರ್ಕಾರಿ ಜಮೀನುಗಳು ಆರಣ್ಯ ಇಲಾಖೆಯವರಿಗೆ ಬೇಕಾಗಿರುವುದರಿಂದ ಪಿತರಣೆ ಗಾಗಿ ಯಾವುದೇ ಜಮೀನು ದೊರಕುವಂತಿಲ್ಲವೆಂದು ಹೇಳಿದ್ದೀರಿ. ಆದರೆ ಅಲ್ಲಿ ಕೆಲವರು ಅಕ್ರಮವಾಗಿ ಆ ಜಮೀನನ್ನು ಸಾಗುವಳಿ ಮಾಡಿ ಮೇಲಾಳ ಪಡೆಯುತ್ತಿದ್ದಾರೆಂಬುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೆ ? ಮತ್ತು ಆರಣ್ಯ ಇಲಾಖೆಯವರು ಆ ಭೂಮಿ ಸಮೀಪದಲ್ಲಿ ಬಿನ್ನತ್ತಾರೆ. ರೆವಿನ್ಯೂ ಇಲಾಖೆಯವರೂ ಕೂಡ ಸಮೀಪದಲ್ಲಿ ಬಿನ್ನತ್ತಾರೆ. ಹಾಗಾದರೆ ಆ ಭೂಮಿ ಯಾರಿಗೆ ಸೇರಿದ್ದು ?

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲ ಭೂಮಿಯೂ ಸರ್ಕಾರಕ್ಕೆ ಸೇರಿದ್ದು. ಕೊಡುವಾಗ ಮಾತ್ರ ರೆವಿನ್ಯೂ ಇಲಾಖೆಗೆ ಬರುತ್ತದೆ. ರೆವಿನ್ಯೂ ಇಲಾಖೆಯವರು ಯಾವ ಜಮೀನನ್ನು ಕೊಟ್ಟಿದ್ದಾರೆಂಬುದು ಅದರಲ್ಲಿ ಅರಣ್ಯ ಇಲಾಖೆಯವರು ಕಾಡನ್ನು ಅಭಿವೃದ್ಧಿ ಪಡಿಸುವುದಕ್ಕೆ ತೊಂದರೆ ಮಾಡುತ್ತಿದ್ದಾರೆ.

ಶ್ರೀ ವಿ. ಪಿ. ಮುದಗಲ್. ರೆವಿನ್ಯೂ ಇಲಾಖೆಯವರು ದರ್ಗಾವನ್ನು ಮಾಡಿದೆಯೆಂದು ಹೇಳಿದರೂ ಕೂಡ, ದರ್ಗಾವನ್ನು ತೆಗೆಯಲೆಂದು ಅರಣ್ಯ ಇಲಾಖೆಯವರು ಹೇಳುತ್ತಾರೆ. ಅಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಬೇಸಿಗೆ ಕಾಲದಲ್ಲಿ ಉಲಸೂರು ಬೆಳೆದು ನೀರಾವರಿ ಪತ್ರಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ಬಸವಲಿಂಗಪ್ಪ.—ಅಂಥ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿದೆ. ಅಂಥವನ್ನು ಬೃಂದುವರಿಯಲಿಕ್ಕೆ ಬಿಡುವುದಿಲ್ಲ. ಸೂಕ್ತ ಕ್ರಮ ತೆಗೆದುಕೊಂಡು ಅಂಥವರನ್ನು ಲ್ಲಿದ ಕಿತ್ತು ಹಾಕಲಿಕ್ಕೆ ಪ್ರಯತ್ನ ಮಾಡ್ತೇವೆ.

ಶ್ರೀ ವಿ. ಪಿ. ಮುದಗಲ್.—ತಾವು ಉತ್ತರದಲ್ಲಿ, ಅಕ್ರಮವಾಗಿ ಹೊಂದಿರುವ ಜಮೀನುಗಳ ಪಟ್ಟಿಯನ್ನು ಕೊಟ್ಟಿದ್ದೀರಿ. ಆ ಪಟ್ಟಿಯಲ್ಲಿ ಸೋಲಾಪುರ ಸುಗರ್ ಫ್ಯಾಕ್ಟರಿಗೆ ಬಂದಿರುವ ಜಮೀನು ಎಷ್ಟಾಯಿತು ಸೇರಿಸಿಲ್ಲವೆ ? ಸೇರಿಸಿದ್ದರೆ ಎಷ್ಟು ಸೇರಿಸಿ ? ಪಾಸಾಗಿ ತಿಳಿದ ಮಟ್ಟಿಗೆ ಅವರು ಸುಮಾರು ಎಕರೆ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ತುಂಗಭದ್ರಾ ನದಿ ದಂಡೆಯಲ್ಲಿ ಕೆಲವು ಗದ್ದೆಗಳಿವೆ, ಅವನ್ನು ದೊಡ್ಡ ದೊಡ್ಡ ಜಮೀನ್ದಾರರು ಅಕ್ರಮವಾಗಿ ಬೇನಾಮಿ ಸಾಗು ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಸೇನಾನಾಯರೂ ಸರ್ಕಾರ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ ಆ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರಕ್ಕೆ ಬಂದಿರುವ ಇದರಿಂದ ಪ್ರಕಾರ ಕೆಲವು ಭೂಮಿ ಜಮೀನನ್ನು ಆ ಜಮೀನ್ದಾರರು ಅಕ್ರಮವಾಗಿ ಸಾಗು ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಅದನ್ನೆಲ್ಲ ಹಿಡಿದು ಜಮೀನನ್ನು ಪಾಲಿ ಮಾಡುವುದಕ್ಕೆ ಸರ್ಕಾರ ಸೂಚನೆ ಕೊಡುತ್ತದೆ.

ಶ್ರೀ ವಿ. ಪಿ. ಮುದಗಲ್. ನಾನು ಸೋಲಾಪುರ ಸುಗರ್ ಫ್ಯಾಕ್ಟರಿಯವರು ಅಕ್ರಮ ಮಾಡಿರುವ ಬಗ್ಗೆ ಕೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಯಾರೇ ಆಗಿರಲಿ, ಅವರನ್ನೆಲ್ಲ ಹಿಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮೊದಲೇ ಹೇಳಿದ್ದೇನಲ್ಲ.

ಶ್ರೀ ಜಿ. ಮಾದೇಗೌಡ.—ಸಾಮಾನ್ಯವಾಗಿ ಬಡಗಂಬಳಿಗೆ ಜಮೀನನ್ನು ಕೊಡುವುದಕ್ಕೆ ಬಹಳ ಕಾನೂನು ಇವೆ. ತಹಶೀಲ್ದಾರರು ಜಮೀನನ್ನು ಹೇಗೆ ಬೇಕೆಂದರು ಇವೆ. ಆದರೆ ಮಂತ್ರಿಗಳಿಗೆ ಅಧಿಕಾರವಿಲ್ಲ ಎಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ, ನೀವು ನಿಮಗೆ ಬೇಕಾದವರಿಗೆ ನಿಮ್ಮ ಪಕ್ಷದವರಿಗೆ, ನಿಮ್ಮ ಸೆಂಟಿರಿಸ್ಟರಿಗೆ, ಹೀಗೆ ಇಂಥವರಿಗೇ ಕೊಡಿ ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟರೆ ಹೇಗೆ ? ಇಂಥ ನಿದರ್ಶನಗಳು ಬೇಕಾದಷ್ಟು ನನ್ನ ಗಮನಕ್ಕೆ ಬಂದಿವೆ. ಕಾನೂನಿನಲ್ಲಿ ಅಂಥವರಿಗೆ ಕೊಡಲಿಕ್ಕೆ ಅವಕಾಶವಿಲ್ಲದಿದ್ದರೂ ಸಹ ನೀವು ಅಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟರೆ ಆ ಅಧಿಕಾರಿಗಳು ಏನು

ಮಾಡಬೇಕು ? ಅವರು ಪಾಪ; ಇಕ್ಕಟ್ಟಿಗೆ ಸಿಕ್ಕುಹಾಕಿಕೊಂಡಿದ್ದಾರೆ. ಅಂಥ ಡೈರೆಕ್ಷನ್ಸ್ ಏನಾದರೂ ಕೊಟ್ಟಿದ್ದೀರಾ ? ಕೊಟ್ಟಿದ್ದರೆ, ಇನ್ನು ಮುಂದಾದರೂ ಆ ರೀತಿ ಡೈರೆಕ್ಷನ್ ಕೊಡತಕ್ಕದ್ದನ್ನು ನಿಲ್ಲಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆದೇಶ ಕೊಡತಕ್ಕದ್ದನ್ನು ಕೊಟ್ಟೇ ಕೊಡುತ್ತೇವೆ. ಕಾನೂನು ಪ್ರಕಾರ ಯಾವ್ಯಾವ ಅಧಿಕಾರಿಗಳು ಕೆಲಸ ಮಾಡುವುದಿಲ್ಲ ಅವರಿಗೆ ಹೇಗೆ ಮಾಡಿರಿ ಎಂದು ನಾವು ಆದೇಶವನ್ನು ಕೊಡಲೇ ಬೇಕಾಗುತ್ತದೆ; ಜಮೀನಿದ್ದವರಿಗೇ ಜಮೀನನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದರೆ ಕೊಡಕೂಡದೆಂದು ಆದೇಶ ಕೊಡಲಿಕ್ಕೆ ಪ್ರಯತ್ನಿಸುತ್ತೇವೆ. ಇಂಥವರಿಗೆ ಕೊಡಬೇಕೆಂದು ಹೇಳುತ್ತೇವೆ. ಅಂದ ಮಾತ್ರಕ್ಕೆ ನೀವು ಹೇಳಿದ ಹಾಗೆ ನೆಂಟರಿಷ್ಟರಿಗೆ ಕೊಡುತ್ತಿಲ್ಲ. ಬಡವರಿಗೆ ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಆರೀತಿ ಕೊಡಬೇಕೆಂದು ಸರ್ಕಾರದ ನೀತಿಯೂ ಉಂಟು. ಅದರ ಪ್ರಕಾರ ಮಾಡಲೇಬೇಕು. ಕೆಲವು ಅಧಿಕಾರಿಗಳು ನೀತಿನಿಯಮಗಳನ್ನು ಬಿಟ್ಟು ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ, ಅಂಥವರಿಗೆ ಡೈರೆಕ್ಷನ್ ಕೊಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಕಾನೂನಿನ ಪ್ರಕಾರ ಯಾರಿಗೆ ಭೂಮಿ ಸಲ್ಲಬಾರದೋ ಅಂಥವರಿಗೂ ಕೂಡ ಕೊಡಿ ಎಂದು ಹೇಳಿದ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ ಇದಕ್ಕೆ ಏನು ಹೇಳುತ್ತೀರಿ ?

[ಉತ್ತರ ಇಲ್ಲ]

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ ಕಾನೂನಿಗೆ ವಿರೋಧವಾಗಿ ಜಮೀನು ಕೊಡುವುದಕ್ಕೆ ಡೈರೆಕ್ಷನ್ ಕೊಟ್ಟಂಥ ನಿದರ್ಶನಗಳು ಇದೆ ಎಂದು. ಕಾನೂನಿನ ಚೌಕಟ್ಟಿನಲ್ಲಿ ಕೊಡುವುದಕ್ಕೆ ಅಧಿಕಾರ ಇದೆ. ಆದರೆ ಕಾನೂನು ಬಿಟ್ಟು ಕೊಟ್ಟಿರುವ ನಿದರ್ಶನಗಳಿವೆ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಿದರ್ಶನಗಳಿದ್ದರೆ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಮಾದೇಗೌಡ.—ಬಡವರ ಉದ್ಧಾರಕರು, ಆರಾಧಕರು ನೀವೊಬ್ಬರೇ ಅಲ್ಲ, ನಮಗೂ ಕಳಕಳಿ ಇದೆ. ಉಡಾಫ್ ಉತ್ತರವನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡುವುದಿಲ್ಲ. ಜವಾಬ್ದಾರಿ ಸ್ಥಾನದಿಂದ ಜವಾಬ್ದಾರಿ ಉತ್ತರವನ್ನು ನೀವು ಕೊಡಬೇಕಾಗುತ್ತದೆ. ನಾನು ಹೇಳುವ ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಉತ್ತರ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಅವರು ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಜಿ. ಮಾದೇಗೌಡ.—ಸರಿಯಾದ ಉತ್ತರ ಕೊಡುತ್ತಿಲ್ಲ

ಅಧ್ಯಕ್ಷರು.—ಇದೇ ರೀತಿ ಉತ್ತರ ಕೊಡಬೇಕು ಎಂದು ಅವರಿಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಕಾನೂನು ಪ್ರಕಾರ ಯಾರಿಗೆ ಜಮೀನು ಕೊಡುವುದಕ್ಕೆ ಅವಕಾಶವಿಲ್ಲವೋ ಅಂಥವರಿಗೂ ಸಹ ಜಮೀನು ಕೊಡಿ ಎಂದು ಮಂತ್ರಿಗಳ ಮುಖಾಂತರ ಅಧಿಕಾರಿಗಳಿಗೆ ಆದೇಶಗಳು ಹೋಗುತ್ತಿವೆ. ಕಾನೂನು ಪ್ರಕಾರ ಅವಕಾಶವಿಲ್ಲದಿದ್ದರೂ ಕೂಡ ಮಂತ್ರಿಗಳ ಆದೇಶ ಹೋದ ಮೇಲೆ ಕೆಳ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕೇ ಬೇಡವೇ ಎಂಬ ವಿಷಯದಲ್ಲಿ ಇಕ್ಕಟ್ಟಿನ ಪ್ರಸಂಗ ಬಂದಿವೆ. ಸರ್ಕಾರಕ್ಕಾಗಲೀ, ಮಂತ್ರಿಗಳಿಗಾಗಲೀ ಜಮೀನನ್ನು ಕೊಡತಕ್ಕ ಅಧಿಕಾರ ಇಲ್ಲ, ಆದ್ದರಿಂದ ಆ ರೀತಿಯ ಡೈರೆಕ್ಷನ್ ಕೊಡುವುದು ತಪ್ಪು ಎಂದು ಹೇಳುತ್ತಿದ್ದರೆ ಮಂತ್ರಿಗಳು ಹಾರಾಟದ ಉತ್ತರ ಕೊಟ್ಟರೆ ಅವರು ಹೇಳುವುದನ್ನೆಲ್ಲಾ ಕೇಳಿಕೊಂಡು ಹೋಗುವುದಕ್ಕಲ್ಲ ನಾವು ಇಲ್ಲಿ ಕುಳಿತಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಹಾರಾಟದ ಪ್ರಶ್ನೆ ಕೇಳಿದರೆ ಹಾರಾಟದ ಉತ್ತರವೇ ಬರುತ್ತದೆ. ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇವೆ.

ಶ್ರೀ ಪಿ. ರಾಂದೇವ್.—ಕೋಪ ಯಾತಕ್ಕೆ ? ಸರಿಯಾಗಿ ಉತ್ತರ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರಿಗಳು ಕಾನೂನು ಪ್ರಕಾರ ಕೆಲಸ ಮಾಡುತ್ತಾರೆ. ನಾವು ಕಾನೂನಿನ ಚೌಕಟ್ಟಿಗೆ ಒಳಪಟ್ಟೇ ಇಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೆ ನೀವು ಹೇಳುವಾಗ ಕೆಲವು ವೇಳೆ ಸ್ವಲ್ಪ ನೋವಾಗುತ್ತದೆ, ಆಗ ಸಿಟ್ಟಿನಿಂದ ಮಾತನಾಡಬೇಕಾಗುತ್ತದೆ. ಯಾರಿಗೆ ನೋವಿರುವುದಿಲ್ಲ ಅವರು ಸಂತೋಷದಿಂದ ಮಾತನಾಡುತ್ತಾರೆ.

Confirmation of unauthorised cultivation of land in Tiptur Taluk.

635. SRI V. L. SIVAPPA (Tiptur) Will the Minister for Revenue be pleased to state:—

(*a*) the extent of confirmation of unauthorised cultivation of land in Tipiur Taluk between 1st December 1977 and 30th April 1978;

(*b*) and the number of unauthorised cultivators granted saguvali chits and the number of acres ?

SRI B. BASAVALINGAPPA (Minister for Revenue)—

(*a*) 2535 Acres 36 Guntas.

(*b*) Saguvali chits have been issued to 1146 persons involving an extent of 2,302 acres 27 guntas.

ಶ್ರೀ ವಿ. ಎಲ್. ಶಿವಪ್ಪ.—ನಾನು ಕೇಳಿರುವ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ಅಕ್ರಮ ಸಾಗುವಳಿ ಜಮೀನಿನ ವಿಸ್ತೀರ್ಣವೆಷ್ಟು ಹಾಗೂ ಎಷ್ಟು ಮಂದಿ ಅಕ್ರಮ ಸಾಗುವಳಿದಾರರಿಗೆ ಸಾಗುವಳಿ ಚೀಟಿಗಳನ್ನು ನೀಡಲಾಗಿದೆ ಮತ್ತು ಸಾಗುವಳಿ ಚೀಟಿ ನೀಡದ ಜಮೀನಿನ ವಿಸ್ತೀರ್ಣವೆಷ್ಟು ಎಂದು ಕೇಳುವುದಕ್ಕೆ ಉತ್ತರ ಕೊಟ್ಟಿದ್ದೀರಿ. ಆದರೆ ಮತ್ತೆ 'ಬಿ' ಪ್ರಶ್ನೆಯಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಜಮೀನು ಮಂಜೂರು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದೇನೆ. ಆ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ದಯಮಾಡಿ ಇದಕ್ಕೆ ಉತ್ತರ ಕೊಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ—ನಿಮ್ಮ ಪ್ರಶ್ನೆಗೆ ಉತ್ತರ ಸರಿಯಾಗಿ ಬಂದಿದೆ. ನೀವು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮಂಜೂರು ಮಾಡಿದ್ದೀರಾ ಎಂದು ಕೇಳಿದ್ದರೆ ಉತ್ತರ ಕೊಡುತ್ತಿದ್ದೆವು, ನೀವು ಆ ಪ್ರಶ್ನೆ ಕೇಳಿಲ್ಲ, ನಾವು ಉತ್ತರ ಕೊಟ್ಟಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ನಾನು ಕೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಪ್ರಶ್ನೆಯನ್ನು ಮತ್ತು ಉತ್ತರವನ್ನು ಇನ್ನೊಂದು ಸಾರಿ ಸರಿಯಾಗಿ ಓದಿ.

ಶ್ರೀ ವಿ. ಎಲ್. ಶಿವಪ್ಪ.—ಓದಿದ್ದೇನೆ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ೧೯೭೭ರಲ್ಲಿ ಆರ್ಡರ್ ಇಷ್ಯೂ ಆದಮೇಲೆ ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟಿದ್ದೀರಿ, ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿರುವವರಲ್ಲಿ ಕೆಲವರನ್ನು ಪೆಕೇಟ್ ಮಾಡಿಸಿ ಬೇರೆಯವರಿಗೆ ಆ ಭೂಮಿಯನ್ನು ಸ್ಯಾಂಕ್ಷನ್ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿದ್ದರೂ ಅವರಿಗೆ ಮಂಜೂರು ಮಾಡದೇ ಬೇರೆಯವರಿಗೆ ಮಂಜೂರು ಮಾಡಿದ್ದಾರೆ. ನ್ಯಾಯವಾಗಿ ಅಲ್ಲಿ ಜಮೀನುಗಳು ಮಂಜೂರಾಗಿಲ್ಲ.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿದರೆ ಸರಿಯಾಗಿ ಕೇಳಬೇಕು. ಸರಿಯಾಗಿ ಏನೂ ವಿಷಯ ತಿಳಿದುಕೊಳ್ಳಬೇಕೋ ಅದನ್ನು ಕೇಳಬೇಕು. ಎಲ್ಲಾ ಹೀಗೆ ಹೇಳುತ್ತಾ ಹೋದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—೨೨೯೧ ಜನ ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿದ್ದರು. ಅದರಲ್ಲಿ ೧೪೨೬ ಜನಕ್ಕೆ ಜಮೀನನ್ನು ಮಂಜೂರು ಮಾಡಿದ್ದೇವೆ. ಜಮೀನಿರತಕ್ಕವರ ಸುಮಾರು ೭೬೬ ಜನ ಇದರು ಅವರನ್ನು ಅಲ್ಲಿಂದ ಓಡಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿದ್ದರೂ ಕೂಡ ಅವರಿಗೆ ಕೊಡುವುದನ್ನು